# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

**ಪ್ರಕರಣದ ಸಂಖ್ಯೆ:ಎಡಿಸ್ ಆರ್.ಆರ್.ಟಿ.ಎಸ್.ಆರ್: 16/15-16**

**ದಿನಾಂಕ : 25 -10-2016.**

**ಉಪಸ್ಥಿತರು : ಡಾ. ರಾಜೇಂದ್ರ ಕೆ.ವಿ, ಭಾ.ಆ.ಸೇ.**

**ಉಪವಿಭಾಗಾಧಿಕಾರಿ**

**ಪುತ್ತೂರು ಉಪವಿಭಾಗ**

**ಪುತ್ತೂರು**

| ಮೇಲ್ಮನವಿದಾರರು | | ಪ್ರತಿವಾದಿಯವರು |
|---|---|---|
| ಜಿ. ಹಮೀದ್ | | 1. ತಹಶೀಲ್ದಾರರು |
| ಬಿನ್ ಹಾಜಿ ಅಬ್ದುಲ್ ರಹಿಮಾನ್ | | ಬೆಳ್ತಂಗಡಿ ತಾಲೂಕು ದ.ಕ. |
| ಅಳಕೆ ಮನೆ, | - ಮತ್ತು - | 2. ಕಂದಾಯ ನಿರೀಕ್ಷಕರು |
| ತಣ್ಣೀರುಪಂತ ಗ್ರಾಮ, | | ಕೊಕ್ಕಡ ಹೋಬಳಿ |
| ಬೆಳ್ತಂಗಡಿ ತಾಲೂಕು ದ.ಕ. | | ಬೆಳ್ತಂಗಡಿ ತಾಲೂಕು ದ.ಕ. |
| (ನ್ಯಾಯವಾದಿ ಶ್ರೀ ರಾಘವೇಂದ್ರ ನಾಯಕ್ ಎನ್) | | |

- - - - -

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136ರನ್ವಯ ಬೆಳ್ತಂಗಡಿ ತಾಲೂಕು ತನ್ನೀರುಪಂಥ ಗ್ರಾಮದ MRH: 14/13-14 ದಿನಾಂಕ: 03-09-2013 ರಂತೆತಹಶೀಲ್ದಾರರು ನೀಡಿದ ಆದೇಶ ಪ್ರಶ್ನಿಸಿ ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಬೆಳ್ತಂಗಡಿ ತಾಲೂಕು ತಣ್ಣೀರುಪಂತ ಗ್ರಾಮದ ಸ.ನಂ. 115/5 ರ ಪೈಕಿ ವಿಸ್ತೀರ್ಣ 0.18 ಎಕ್ರೆ ಜಮೀನಿನ ಪಹಣಿ ಕಲಂ 9 ರಲ್ಲಿ ಇರುವ "ಇವರ ಎಸ್.ಪಿ.ಎ ಹೋಲ್ಡರರ ನೆಲೆಯಲ್ಲಿ ಎಸ್.ಎ. ಆಯಿಷಾ" ಎಂದು ಹೆಚ್ಚುವರಿ ದಾಖಲು ಭಾಗವನ್ನು ಅಳಿಸಿ "ಜಿ. ಹಮೀದ್ ಬಿನ್ ಹಾಜಿ ಅಬ್ದುಲ್ ರಹಿಮಾನ್" ಎಂದು ಮಾತ್ರ ಪಹಣಿ ದಾಖಲಿಸಲು ಎದ್ರಿಯವರಿಗೆ ಆದೇಶಿಸಬೇಕೆಂದು ಕೋರಿ ಮೇಲ್ಮನವಿ ಸಲ್ಲಿಸಿರುವುದಾಗಿದೆ. ಈ ಮೇಲ್ಮನವಿಯಲ್ಲಿ ಹೇಳಲಾದ ಜಮೀನು ಮೇಲ್ಮನವಿದಾರರಿಗೆ ಕ್ರಯದ ಹಕ್ಕಿನಂತೆ ಬಂದಿರುತ್ತದೆ. ಇದರೊಂದಿಗೆ ಜಿ.ಪಿ.ಎ. ಹೋಲ್ಡರ್ ಹೆಸರು ಸೇರಿಸಿ ಪಹಣಿ ದಾಖಲಿಸಲು ಆದೇಶ ನೀಡಿರುವುದರಿಂದ ಬಾಧಿತರಾದ ಮೇಲ್ಮನವಿದಾರರು ಈ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದಾಗಿದೆ. ವಿಳಂಬ ವಿನಾಯ್ತಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 52 ಹಾಗೂ ಕಾಲಮಿತಿ ಕಾಯ್ದೆ ಕಲಂ 5 ರಡಿ ಅರ್ಜಿ ಸಲ್ಲಿಸಿರುತ್ತಾರೆ.

ಸದ್ರಿ ಮೇಲ್ಮನವಿಯನ್ನು ಪರಿಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ: 28-04-2015 ರಂದು ಹಾಜರಾಗುವಂತೆ ನೋಟೀಸು ನೀಡಿ

ಸಕಾರಣಗಳಿಗಾಗಿ ಮುಂದೂಡಲಾಗಿ ಅಂತಿಮವಾಗಿ ದಿನಾಂಕ : 05-07-2016 ರಂದು ವಿಚಾರಣೆಗೆ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿದಾರರ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ಪುನರುಚ್ಚರಿಸುತ್ತಾ ಮ್ಯುಟೇಶನ್ ಆದೇಶ ಮಾಡುವ ಸಮಯ ಪ್ರತಿವಾದಿಯವರಿಗೆ ಮೇಲ್ಮನವಿದಾರರು ಮೌಖಿಕವಾಗಿ ವಿಚಾರ ತಿಳಿಸಿದರೂ ಸಹಾಯಕ ಕಮೀಷನರ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಿ ಎಂದು ತಿಳಿಸಿದ ಕಾರಣ ಈ ಮೇಲ್ಮನವಿ ಸಲ್ಲಿಸಿ ಜಿ.ಪಿ.ಎ ಹೋಲ್ಡರ್ ಎಸ್.ಎ. ಆಯಿಷಾ ರವರ ಹೆಸರನ್ನು ಪಹಣಿ ಕಲಂ 9 ರಿಂದ ವಜಾ ಮಾಡುವಂತೆ ಕೋರಿ ವಾದ ಮಂಡಿಸುತ್ತಾರೆ.

ಮೇಲ್ಮನವಿಯ ಎಲ್ಲಾ ಅಂಶಗಳನ್ನು ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ಮನವಿದಾರರ ಮನವಿ ಸಮಂಜಸವಾಗಿದ್ದು 9ನೇ ಕಲಂ ನಲ್ಲಿ ಹಕ್ಕುದಾರ ಬಿ. ಹಮೀದ್ ಬಿನ್ ಹಾಜಿ ಅಬ್ದುಲ್ ರಹಿಮಾನ್ ರ ಹೆಸರನ್ನು ಮಾತ್ರ ಉಳಿಸಿಕೊಂಡು ಎಸ್.ಪಿ.ಎ. ಹೋಲ್ಡರ್ ರ ನೆಲೆಯಲ್ಲಿ ಎಸ್.ಎ. ಆಯಿಷಾ ಎಂಬ ದಾಖಲಾತಿಯನ್ನು ತೆಗೆದು ಹಾಕಬೇಕಾಗಿರುವುದನ್ನು ಮನಗಂಡು ಈ ಕೆಳಗಿನಂತೆ ಆದೇಶಿಸಿದೆ.

## ಆದೇಶ.

ಮೇಲ್ಮನವಿಯನ್ನು ಪುರಸ್ಕರಿಸಿದೆ.

ಬೆಳ್ತಂಗಡಿ ತಾಲೂಕು ತಣ್ಣೀರುಪಂತ ಗ್ರಾಮದ ಜಮೀನು ಸ.ನಂ. 115/5 ವಿಸ್ತೀರ್ಣ 0.18 ಎಕ್ರೆಯ ಪಹಣಿ ಕಲಂ 9 ರಲ್ಲಿ ಹಕ್ಕುದಾರ "ಜಿ. ಹಮೀದ್ ಬಿನ್ ಹಾಜಿ ಅಬ್ದುಲ್ ರಹಿಮಾನ್" ಹೆಸರನ್ನು ಮಾತ್ರ ಉಳಿಸಿಕೊಂಡು ಉಳಿದ ದಾಖಲಾತಿಗಳನ್ನು ವಜಾಮಾಡಲು ನಿಯಮಾನುಸಾರ ಸೂಕ್ತ ಕ್ರಮ ಜರಗಿಸಲು ಬೆಳ್ತಂಗಡಿ ತಹಶೀಲ್ದಾರರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ :25-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

(ಡಾ. ರಾಜೇಂದ್ರ ಕೆ.ವಿ, ಐ.ಎ.ಎಸ್.)
ಸಹಾಯಕ ಆಯುಕ್ತರು
ಪುತ್ತೂರು ಉಪವಿಭಾಗ, ಪುತ್ತೂರು ದ.ಕ.

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ರಾಘವೇಂದ್ರ ನಾಯಕ್ ಎನ್ ಇವರ ಮುಖಾಂತರ ಜ್ಯಾರಿ.
ಪ್ರತಿ: 2ನೇ ಪ್ರತಿವಾದಿಯವರಿಗೆ ನೋಂದಾಯಿತ ಅಂಚೆ ಮುಖಾಂತರ ಜ್ಯಾರಿ.
ಪ್ರತಿ: ತಹಶೀಲ್ದಾರರು ಬೆಳ್ತಂಗಡಿ ತಾಲೂಕು ಇವರಿಗೆ ಸೂಕ್ತ ಕ್ರಮಕ್ಕಾಗಿ.